<u>1ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ</u>
<u>ಬೆಂಗಳೂರು ನಗರ</u>

ಸಿ.ಸಿ. ನಂ.17018/2023

ಸಿಡಬ್ಲೂ -2 ಪಿಡಬ್ಲೂ-3

| | |
|---|---|
| ಸಾಕ್ಷಿದಾರರ ಹೆಸರು | : ಪಾರ್ಥಿಬನ್ |
| ತಂದೆಯ ಹೆಸರು | : ಕೃಷ್ಣಮೂರ್ತಿ |
| ವಯಸ್ಸು | : 22 ವರ್ಷ |
| ಕೆಲಸ | : ವ್ಯಾಪಾರ |
| ವಾಸ | : ಪುಟ್ಟೇಯ್ಯನಪಾಳ್ಯ , ಬೆಂಗಳೂರು |

<u>ಸಾಕ್ಷಿಯನ್ನು ದಿನಾಂಕಃ 09-01-2025 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.</u>
<u>ಮುಖ್ಯ ವಿಚಾರಣೆ ಹಿ.ಸ.ಸಾ.ಅ. ರವರಿಂದಃ</u>

ಚಾಸಾ-3 ರಘು ಮತ್ತು ಆರೋಪಿ ಗೊತ್ತು. ಸಾಕ್ಷಿಯು ನಿಪಿ-1 ಮತ್ತು 2 ರಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-1ಸಿ ಮತ್ತು ನಿಪಿ-2ಸಿ ಎಂದು ಗುರುತಿಸಲಾಯಿತು. ದಿ.24.03.2023 ರಂದು ಜಯನಗರ 4ನೇ ಹಂತದಲ್ಲಿ ಚಾಸಾ-1 ರವರಾದ ಲತಾ ರವರು ಆರೋಪಿ ಬಳಿ ಇದ್ದ ಆನೆ ದಂತವನ್ನು ತೋರಿಸಿರುತ್ತಾರೆ. ಸದರಿ ದಂತವನ್ನು ವಶಪಡಿಸಿಕೊಂಡ ಕಾಲಕ್ಕೆ ನಾನು ನಿಪಿ-1 ಮತ್ತು 2ಕ್ಕೆ ಸಹಿ ಮಾಡಿರುತ್ತೇನೆ. ಸಾಕ್ಷಿಗೆ ಮು.ಮಾ-1 ರಿಂದ 3 ಮತ್ತು ನಿಪಿ-3 ಮತ್ತು 4 ನ್ನು ತೋರಿಸಲಾಗಿ ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿ, ಅವರಿಂದ ಆನೆ ದಂತವನ್ನು ವಶಪಡಿಸಿಕೊಳ್ಳಲಾಗಿತ್ತು ಎಂದು ನುಡಿಯುತ್ತಾರೆ.

<u>ಪಾಟೀ ಸವಾಲು ಆರೋಪಿತರ ಪರ ಶ್ರೀ.ಎ.ಆರ್ ವಕೀಲರಿಂದಃ</u>

ನಾನು 10 ನೇ ತರಗತಿ ಓದಿರುತ್ತೇನೆ. ನನಗೆ ಕನ್ನಡ ಓದೆಯಲು ಮತ್ತು ಬರೆಯಲು ಬರುವುದಿಲ್ಲ. ಪೋಲೀಸರು ನನಗೆ ಲಿಖಿತವಾಗಿ ನೋಟೀಸನ್ನು ಕೊಟ್ಟಿರುವುದಿಲ್ಲ. 7.00 ಗಂಟೆಗೆ ನಾನು ಹಣ್ಣಿನ ಅಂಗಡಿಯ ಬಳಿ ಹೋಗಿದ್ದೆ. ನನ್ನ ಅಂಗಡಿಯಿಂದ ಪಾರ್ಕ 200 ಮೀ ಅಂತರ ಇರುತ್ತದೆ. ನಿಪಿ-1 ಕ್ಕೆ ನಾನು ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ಆ ಸಮಯದಲ್ಲಿ ಚಾಸಾ-1 ಮತ್ತು ಇನ್ನೂ ಇಬ್ಬರೂ ಮೂವರು ಇದ್ದರು. ನಿಪಿ-1ರಲ್ಲಿ ಏನು ಬರೆದಿದೆ ಎಂದು ನಾನು ತಿಳಿದುಕೊಂಡಿರುವುದಿಲ್ಲ. ಈ

ಪ್ರಕರಣದ ಬಗ್ಗೆ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಮು.ಮಾ ಗಳನ್ನು ನಾನು ಠಾಣೆಯಲ್ಲಿ ನೋಡಿರುತ್ತೇನೆಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಪಾರ್ಕ ಬಳಿ ನೋಡಿರುತ್ತೇನೆಂದು ನುಡಿಯುತ್ತಾರೆ. ಆಗ ಸಮಯ 1.00 ಗಂಟೆ ಆಗಿತ್ತು. ನ್ಯಾಯಾಲಯಕ್ಕೆ ಬರಬೇಕೆಂದು ಕರೆಯನ್ನು ಮಾಡಿ ತಿಳಿಸಿರುತ್ತಾರೆ. ಕರೆಯನ್ನು ಮಾಡಿದಾಗ ಇದೇ ರೀತಿ ಸಾಕ್ಷಿ ನುಡಿಯಬೇಕೆಂದು ಹೇಳಿದ್ದರು ಎಂದರೆ ಸರಿಯಲ್ಲ. ಪೋಲೀಸರ ಹೇಳಿದ ಮೇರೆಗೆ ನಾನು ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಇದೇ ಮೊದಲ ಬಾರಿಗೆ ಆರೋಪಿಯನ್ನು ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಪೋಲೀಸರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಯಿತು.)

ಓ ಹೇ ಕೇ ಸ ಇ ಒ

1 ನೇ ಅ. ಮು. ನ್ಯಾ.ದಂ. ನ್ಯಾ